ಭೇಟಿಯಲ್ಲಿ ನನ್ನ ವೈದ್ಯರು ಔಷಧಿ ಚೀಟಿಯ ಹಿಂಭಾಗದಲ್ಲಿ ಹೊಟ್ಟೆಯ ಚಿತ್ರವನ್ನು ಬರೆದು ಈ ವ್ಯಾಧಿಯ ವೈಜ್ಞಾನಿಕ ಕಾರಣಗಳನ್ನು ತಾರ್ಕಿಕವಾಗಿ ನನಗೆ ವಿವರಿಸುತ್ತ ಕಡೆಯಲ್ಲಿ ಮಂದ್ರಮಧ್ಯಮಸ್ವರದಲ್ಲಿ ಹೇಳಿದರು – 'ನೋಡಿ, ನೀವೀಗ ಒಂದು ವಿಷವೃತ್ತದ ಒಳಗೆ ಸಿಲುಕಿಕೊಂಡಿದ್ದೀರಿ. ಹೊಟ್ಟೆಯಲ್ಲಿ ಆಗುತ್ತಿರುವ ಆಮ್ಲೀಯತೆಯ ಕಾರಣದಿಂದಾಗಿ ನಿಮಗೆ ರಾತ್ರಿ ನಿದ್ದೆ ಬರುವುದಿಲ್ಲ; ಮತ್ತು ಹಾಗೆ ನಿದ್ದೆ ಬಾರದಿರುವ ಕಾರಣದಿಂದಾಗಿ ಮಾರನೆಯ ದಿನ ನಿಮ್ಮ ಆಮ್ಲೀಯತೆ ಇನ್ನಷ್ಟು ಬಿಗಡಾಯಿಸುತ್ತದೆ'. ಹಾಗಿದ್ದರೆ, 'ಕೋಳಿ ಮತ್ತು ಮೊಟ್ಟೆಗಳ ಈ ಕಾರ್ಯಕಾರಣವರ್ತುಲದಿಂದ ನಾನು ಪಾರಾಗುವ ಬಗೆ ಏನಾದರೂ ಉಂಟೆ?' ಎಂಬ ನನ್ನ ಪ್ರಶ್ನೆಗೆ ಆ ವೈದ್ಯರು ನಗುತ್ತಲೇ ಉತ್ತರಿಸಿದರು – 'ಖಂಡಿತ ಇದೆ. ಕೆಲವು ಕಾಲ ನೀವೀಗ ನಿದ್ರೆ ಮಾತ್ರೆಯನ್ನು ತೆಗೆದುಕೊಳ್ಳುವುದೇ ಯೋಗ್ಯವೆಂದು ನನಗನ್ನಿಸುತ್ತದೆ'.

ಒಂದು ಕ್ಷಣ ನನಗೆ ಗಾಬರಿಯಾದರೂ ಬಳಿಕ ನಾನು ಆ ತಾರ್ಕಿಕ ಸಲಹೆಯನ್ನು ಸ್ವೀಕರಿಸಿದೆ; ನಿದ್ರೆ ಮದ್ದುಗಳಲ್ಲಿಯೇ ಅತ್ಯಂತ ನಿರಪಾಯಕರವಾದ ಮಾತ್ರೆಯೊಂದರ ಅತ್ಯಂತ ಕನಿಷ್ಠ ಪ್ರಮಾಣವನ್ನು ನನಗವರು ಶಿಫಾರಸ್ಸು ಮಾಡಿದ್ದರು. ಅವತ್ತು, ನಾನು ಆ ಗುಳಿಗೆಯನ್ನು ನುಂಗಿ ನೀರು ಕುಡಿಯಲಾರಂಭಿಸಿದ ಕ್ಷಣದಿಂದಲೇ, ನನ್ನ ಹೊಟ್ಟೆಯ ಸಮಸ್ಯೆಯು ತಲೆಗೆ ವರ್ಗಾವಣೆಯಾಯಿತು ಎಂದು ನನಗೀಗ – ಹಿನ್ನೋಟದ ಕಾಣ್ಕೆಯಲ್ಲಿ – ಗೊತ್ತಾಗುತ್ತಿದೆ. ಕಾರಣ, ಆ ಔಷಧಿ ತೆಗೆದುಕೊಂಡಾಗಿನಿಂದ ನಿದ್ದೆಯೇನೋ ಬರಲಾರಂಭಿಸಿದರೂ ಹೊಟ್ಟೆಯ ಸಮಸ್ಯೆಯು ಸಂಪೂರ್ಣ ಪರಿಹಾರವೂ ಆಗದೆ, ನಾನು ಹೊಟ್ಟೆ ಮಾತ್ರೆಯ ಜತೆಗೆ ತಲೆಯ ಮಾತ್ರೆಯನ್ನೂ ತಿನ್ನುವ ಪರಿಪಾಠ ಶುರುಹಚ್ಚಿಕೊಂಡಿತು. ತತ್ಪರಿಣಾಮವಾಗಿ ವೈದ್ಯರು ಹೇಳಿದ ಆ ವಿಷವರ್ತುಲವು ಇನ್ನಷ್ಟು ಅಗಲವಾದಂತಾಯಿತೇ ಹೊರತು ನಿವಾರಣೆ ಆಗದೆಹೋಯಿತು. ಮಾತ್ರವಲ್ಲ, ಅಲ್ಲಿಯವರೆಗೂ ನಿದ್ದೆಯ ಬಗ್ಗೆ ಯೋಚನೆಯನ್ನೂ ಮಾಡದಿದ್ದ ನನಗೆ ನಿದ್ದೆಯನ್ನು ಕುರಿತ ಪ್ರಜ್ಞಾಪರೀಕ್ಷಣೆ ಆರಂಭಗೊಂಡಿತು.

ಈ ಸಮಯದಲ್ಲಿಯೇ ನಡೆದ ಇನ್ನೊಂದು ಕಥೆಯನ್ನೂ ಇಲ್ಲೇ ಹೇಳಬಹುದು. ನಮ್ಮ ಊರಿಗೆ ರಂಗಭೂಮಿಯನ್ನು ಕುರಿತು ಭಾಷಣ ಮಾಡಲು ಅಮೆರಿಕಾದ ಒಬ್ಬ ತಜ್ಞರು ಬಂದಿದ್ದರು. ಅವರ ಭಾಷಣ ಮುಗಿದು ಊಟ ಹಾಕಿಸಿ ನಾನವರನ್ನು ರಾತ್ರಿ ಅತಿಥಿಗೃಹಕ್ಕೆ ಕರೆದೊಯ್ದಾಗ ಅವರು ಸುತ್ತಮುತ್ತ ಏನನ್ನೋ ಹುಡುಕಾಡತೊಡಗಿದರು. ಏನೆಂದು ವಿಚಾರಿಸಲಾಗಿ ಅವರು ವಿದ್ಯುತ್ತಿನ ಒಂದು ಪ್ಲಗ್ ಪಾಯಿಂಟಿಗಾಗಿ ಹುಡುಕುತ್ತಿದ್ದಾರೆಂದು ಗೊತ್ತಾಯಿತು. ಯಾತಕ್ಕೆಂದು ಕೇಳುವಾಗ ಒಂದು ಕಥೆಯೇ ಹೊರಗೆ ಬಂತು. ಅವರು ನಿದ್ರಾಹೀನತೆಯ ಸಮಸ್ಯೆಯಿಂದ ಬಳಲುತ್ತಿದ್ದು ಅದಕ್ಕಾಗಿ ವೈದ್ಯರ ಬಳಿ ಹೋದರಂತೆ; ಮತ್ತು, ಅಮೆರಿಕಾದಲ್ಲಿ ನಿದ್ರೆ ಬಾರದ ಕಾಯಿಲೆಯನ್ನು ವಾಸಿಮಾಡುವುದಕ್ಕಾಗಿಯೇ ತಜ್ಞ ವೈದ್ಯರ ಒಂದು ಉಪಶಾಖೆ ಇದೆಯಂತೆ. ಅಂಥ ಒಬ್ಬ ವೈದ್ಯರು ಇವರನ್ನು ವಿವರವಾಗಿ ಪರೀಕ್ಷಿಸಿ, ಇವರ ನಿದ್ರಾಹೀನತೆಗೆ ಮನಸ್ಸು ಕಾರಣವಲ್ಲ, ಉಸಿರಾಟದ ದೈಹಿಕ ತೊಡಕೇ ಅದಕ್ಕೆ ಕಾರಣವೆಂದು ಕಂಡುಹಿಡಿದರಂತೆ. ಮಾತ್ರವಲ್ಲ, ಅದನ್ನು ಪರಿಹರಿಸಲಿಕ್ಕಾಗಿ ಅಲ್ಲೀಗ ಹೊಸ ಯಂತ್ರವೊಂದನ್ನು ಕಂಡುಹಿಡಿದಿದ್ದಾರಂತೆ; ಆ ಯಂತ್ರವನ್ನು ಚಾಲಿತಗೊಳಿಸಿ, ಅದರ ಒಂದು ಕೊಳವೆಯ ತುದಿಯ ಮುಖವಾಡವನ್ನು ಕಟ್ಟಿಕೊಂಡು ಮಲಗಿದರೆ ಅವರಿಗೆ ಸಲೀಸಾಗಿ ನಿದ್ರೆ ಬರುತ್ತದೆಯಂತೆ. ಸರಿ, ನಾನವರಿಗೆ ಉದ್ದನೆಯ ವೈರೊಂದನ್ನು ವ್ಯವಸ್ಥೆ ಮಾಡಿಸಿಕೊಟ್ಟು ಶುಭರಾತ್ರಿಯ ವಿದಾಯ ಹೇಳಿ ಮನೆಗೆ ಹೊರಟೆ. ಅಂದು ರಾತ್ರಿ ಮಲಗಿದಾಗ ನನಗೆ, ನಾನೂ ಅಂಥದೇ ಒಬ್ಬ ವೈದ್ಯರನ್ನು ಕಂಡು ಅಂಥದೇ ಒಂದು